# ಸ್ವಾಮಿ ವಿವೇಕಾನಂದ

ತ್ಯಾಗ ಮಾಡಿ! ತ್ಯಾಗ ಮಾಡಿ! ನಿಮ್ಮ ದಿವ್ಯ ಸ್ವರೂಪವನ್ನು ತಿಳಿಯಿರಿ! ಏಳಿ, ಎದ್ದೇಳಿ, ಗುರಿ ಮುಟ್ಟುವವರೆಗೂ ನಿಲ್ಲದಿರಿ!

ಈ ಮಾತುಗಳನ್ನು 'ವಿವೇಕಾನಂದರ ವಾಣಿ' ಎಂದೇ ಕರೆಯಲಾಗುತ್ತದೆ. ಅವರು ಭಾರತದ ಅಧ್ಯಾತ್ಮ, ಧರ್ಮ, ಸಂಸ್ಕೃತಿ ಬಲ್ಲವರು. ಪಾಶ್ಚಿಮಾತ್ಯರ ಧರ್ಮ ಹಾಗೂ ಧರ್ಮದ ಕಾಣಿಕೆಗಳನ್ನೂ ಬಲ್ಲವರಾಗಿದ್ದರು.

ಭಾರತದಲ್ಲಿ ದೇವರು, ಧರ್ಮ, ಜಾತಿ ವ್ಯವಸ್ಥೆ ಉಂಟುಮಾಡಿರುವ ಗುಲಾಮಿತನವನ್ನು ಕುರಿತು ಅಪಾರವಾದ ಅಧ್ಯಯನದಿಂದ ಮಾತನಾಡಬಲ್ಲ ಇಬ್ಬರು ವಿದ್ವಾಂಸರೆಂದರೆ ವಿವೇಕಾನಂದ ಮತ್ತು ಅಂಬೇಡ್ಕರ್. ವಿವೇಕಾನಂದರ ಕಾಲದಲ್ಲಿ 'ಏಷ್ಯಾಟಿಕ್ ಸೊಸೈಟಿ' ಭಾರತೀಯ ಸಂಸ್ಕೃತಿಯ ಬಗ್ಗೆ ಸಂಶೋಧನೆ ಆರಂಭಿಸಿತು. ಜನರ ಬದುಕನ್ನು ಅಧೋಗತಿಗಿಳಿಸಿದ್ದ ಸಾಮಾಜಿಕ, ಧಾರ್ಮಿಕ ಆಚರಣೆಗಳು ಹಾಗೂ ಬ್ರಿಟಿಷರ ಜೊತೆಯಲ್ಲಿಯೇ ಕಾಲಿಟ್ಟ ಕ್ರೈಸ್ತ ಮಿಷನರಿಗಳ ಧರ್ಮಪ್ರಚಾರಕ್ಕೆ ಪರಿಹಾರವೆಂಬಂತೆ ರಾಜಾರಾಮ ಮೋಹನರಾಯರಿಂದ ಬ್ರಹ್ಮಸಮಾಜ ಹುಟ್ಟಿತು. ಕ್ರೈಸ್ತ ಮಿಷನರಿಗಳು ಹಾಗೂ ಬ್ರಹ್ಮಸಮಾಜದ ವಿರುದ್ಧ ಸಿಡಿದೆದ್ದ ಬಂಗಾಳದ ಸನಾತನವಾದಿಗಳು ತೀವ್ರಗಾಮಿಗಳಾಗಿ 'ಯುವ ಬಂಗಾಳ'ದವರೆಂದು ಪ್ರಸಿದ್ಧರಾದರು.

ರಾಜಾರಾಮ್ ಮೋಹನರಾಯ್ ನಂತರ ದೇವೇಂದ್ರನಾಥ್ ಟ್ಯಾಗೋರರು ಬ್ರಹ್ಮಸಮಾಜದ ನೇತೃತ್ವ ವಹಿಸಿದರು. ಅದಕ್ಕೆ ಪ್ರತಿಯಾಗಿ ಕೇಶವಚಂದ್ರಸೇನ್ ನೇತೃತ್ವದಲ್ಲಿ 'ಬ್ರಹ್ಮಸಮಾಜ–ಇಂಡಿಯಾ' ಎಂಬ ಸಂಸ್ಥೆ ಹುಟ್ಟಿಕೊಂಡಿತು. ಜಾತಿ ಮತ್ತು ಸಾಮಾಜಿಕ ಸಮಸ್ಯೆಗಳ ಬಗೆಗಿನ ಇವರ ಅಭಿಪ್ರಾಯಗಳನ್ನು ಇಷ್ಟಪಡದ ಯುವಕರ ಗುಂಪು ಅವರ ನಾಯಕತ್ವವನ್ನು ಪ್ರಶ್ನಿಸಿ ಹೊರಬಂದು 'ಸಾಧಾರಣ ಬ್ರಹ್ಮ ಸಮಾಜ' ಸ್ಥಾಪಿಸಿತು. ಇದೇ ಸಂದರ್ಭದಲ್ಲಿ ಕೇಶವಚಂದ್ರಸೇನ್ 'ಪ್ರಾರ್ಥನಾ ಸಮಾಜ' ಸ್ಥಾಪಿಸಿದರು. ಆ ಹೊತ್ತಿಗೆ ಮಹಾದೇವ ಗೋವಿಂದ ರಾನಡೆ, ಸ್ವಾಮಿ ದಯಾನಂದ ಸರಸ್ವತಿ 'ಆರ್ಯಸಮಾಜ'ವನ್ನು ಸ್ಥಾಪಿಸಿದರು.

1875ರಲ್ಲಿ ಉದಯಿಸಿದ 'ಥಿಯೊಸೊಫಿಕಲ್ ಸೊಸೈಟಿ' ಹೊರದೇಶದಲ್ಲಿ ಪ್ರಚಾರ ಮಾಡುವ ಉದ್ದೇಶ ಹೊಂದಿತ್ತು. ಈ ಚಳವಳಿಯ ಮುಂಚೂಣಿಯಲ್ಲಿ ಅನಿಬೆಸೆಂಟ್ ಹಾಗೂ ಭಾರತ ರಾಷ್ಟ್ರೀಯ ಚಳವಳಿಗಾರರು ಇದ್ದರು. ಈ ಸೊಸೈಟಿ ವಿದ್ಯಾಭ್ಯಾಸ ಮತ್ತು ಮಹಿಳೆಯರ ಬಗ್ಗೆ ಹೆಚ್ಚು ಗಮನವಹಿಸಿತು. ಸಾಹಿತ್ಯದಲ್ಲೂ ಈ ರೀತಿಯ ಜಾಗೃತಿ ಮತ್ತು ಪುನರುತ್ಥಾನದ ಚಿಂತನೆಗಳು ತಲೆಯೆತ್ತಿದವು. ಪಾಶ್ಚಿಮಾತ್ಯ ವಿದ್ಯಾಭ್ಯಾಸದಿಂದ ಹುಟ್ಟಿದ ಹೊಸ ಆಲೋಚನೆಗಳು ವೈಚಾರಿಕಾ ದ್ವಂದ್ವವನ್ನು ಸಮರ್ಥವಾಗಿ ಎದುರಿಸಲು ಸಿದ್ಧವಾಯಿತು. ಇಂತಹ ಕಾಲಘಟ್ಟದಲ್ಲಿಯೇ ನಾವು ವಿವೇಕಾನಂದರು ವಿಶ್ವಮಾನವರಾಗಿ ಗುರುತಿಸಿಕೊಂಡ ಚಾರಿತ್ರಿಕ ಅಗತ್ಯವನ್ನು ಗುರುತಿಸಬೇಕಾಗುತ್ತದೆ.

ಜನವರಿ 12, 1863ರಂದು ಭುವನೇಶ್ವರಿ ಮತ್ತು ವಿಶ್ವನಾಥದತ್ತರ ಮಗನಾಗಿ ನರೇಂದ್ರನಾಥ ಜನಿಸಿದರು. ಪಾರಮಾರ್ಥಿಕ ಅನುಭವವನ್ನು ಪಡೆಯಲು ತವಕಿಸುತ್ತಿದ್ದ ಅವರ ಮನಸ್ಸು ಮತಧರ್ಮಗಳ ಅಂತಿಮ ಗುರಿಯೇನು ಎಂದು ಪ್ರಶ್ನಿಸುತ್ತಿತ್ತು. ಒಮ್ಮೆ ಬ್ರಹ್ಮಸಮಾಜದ ದೇವೇಂದ್ರನಾಥ ಟಾಗೋರರನ್ನು ಕಂಡ ಅವರು, 'ನೀವು ದೇವರನ್ನು ಕಂಡಿದ್ದೀರಾ' ಎಂದು ಪ್ರಶ್ನಿಸಿದರು. ಗಲಿಬಿಲಿಗೊಂಡ ದೇವೇಂದ್ರನಾಥ್ ಅವರು 'ಪ್ರೀತಿಯ ತರುಣನೇ ನಿನ್ನಲ್ಲಿ ಯೋಗಿಯ ಕಣ್ಣುಗಳಿವೆ, ನೀನು ಯೋಗವನ್ನು ಅಭ್ಯಾಸ ಮಾಡು' ಎನ್ನುತ್ತಾರೆ.

ನರೇಂದ್ರರಿಗೆ ಹಿರಿಯರೊಬ್ಬರಿಂದ ಇಂತಹ ಪ್ರಶ್ನೆಗಳಿಗೆ ಉತ್ತರ ಸಿಗುವುದು ಕಾಳಿ ದೇವಾಲಯದ ಪೂಜಾರಿ ರಾಮಕೃಷ್ಣ ಪರಮಹಂಸರಿಂದ ಮಾತ್ರ ಎಂಬ ಸಲಹೆ ಸಿಗುತ್ತದೆ. ಆದರೆ ಅವರ ಯುವ ಮನಸ್ಸು ರಾಮಕೃಷ್ಣರನ್ನು ಕೇವಲ ಒಬ್ಬ ಪೂಜಾರಿಯಾಗಿ ಕಂಡಿತ್ತು. ಆಕಸ್ಮಿಕವಾಗಿ ಮಿತ್ರರೊಬ್ಬರ ಮನೆಯಲ್ಲಿ ರಾಮಕೃಷ್ಣರ ಸಮ್ಮುಖದಲ್ಲಿ ದೇವರನಾಮವನ್ನು ನರೇಂದ್ರ ಹಾಡಬೇಕಾಗುತ್ತದೆ. ಈ ಭೇಟಿ ಅವರಿಗೆ ವಿಶೇಷವೆನಿಸದಿದ್ದರೂ ರಾಮಕೃಷ್ಣರಿಗೆ ಮಾತ್ರ ತಾವು ಬಹುಕಾಲದಿಂದ ಹುಡುಕುತ್ತಿದ್ದ ವ್ಯಕ್ತಿ ಈತನೇ ಎಂಬ ಅರಿವಾಗುತ್ತದೆ. ಅವರು ಸರ್ವಸಂಗ ಪರಿತ್ಯಾಗಿಯಾದ, ವಿಷಯಾಸಕ್ತಿಗಳಿಂದ ದೂರವಾದ, ದೇವರನ್ನು ಅರಿಯುವ ಕುತೂಹಲವಿರುವ, ದೀನ ದುರ್ಬಲರ ಬಗ್ಗೆ ಕಾಳಜಿಯುಳ್ಳ ಶಿಷ್ಯನೊಬ್ಬನನ್ನು ಕಂಡುಕೊಳ್ಳುವ ನಿರೀಕ್ಷೆಯಲ್ಲಿದ್ದರು.

ಆಗ ರಾಮಕೃಷ್ಣ ಪರಮಹಂಸರು ಕೋಲ್ಕತ್ತದ ರಾಣಿ ರಾಸಮಣಿ ನಿರ್ಮಿಸಿದ ಕಾಳಿ ದೇಗುಲದಲ್ಲಿ ಕಾಳಿಯನ್ನು 'ಭವತಾರಿಣಿ' ರೂಪದಲ್ಲಿ ಆರಾಧಿಸುತ್ತಿದ್ದರು. ರಾಮಕೃಷ್ಣರ ಆಹ್ವಾನಕ್ಕೆ ಅಷ್ಟಾಗಿ ಸ್ಪಂದಿಸಿದೇ ಇದ್ದರೂ ಮುಂದೊಂದು ದಿನ ಅವರನ್ನು ಕಾಳಿಮಂದಿರದಲ್ಲಿ ಭೇಟಿಯಾಗುತ್ತಾರೆ. ತಕ್ಷಣದ ಅವರ ಪ್ರಶ್ನೆ: 'ನೀವು ದೇವರನ್ನು ಕಂಡಿದ್ದೀರಾ?'. 'ಹೌದು, ನಿನ್ನನ್ನು ಕಂಡಿರುವಂತೆಯೇ ದೇವರನ್ನೂ ಕಂಡಿದ್ದೇನೆ. ಉತ್ಕಟವಾದ ಅಂತಃ ಶಕ್ತಿ ಬೆಳೆದಾಗ ಮಾತ್ರ ಇದು ಅನುಭವ ಸಾಧ್ಯ. ಆಗ ಯಾರಾದರೂ ಅವನೊಂದಿಗೆ ಮಾತನಾಡಬಹುದು' ಎನ್ನುತ್ತಾರೆ. ಈ ಗೊಂದಲಗಳಿಲ್ಲದ ಉತ್ತರ ಪರಸ್ಪರ ಪರೀಕ್ಷಕರಾದ ಈ ಗುರು ಶಿಷ್ಯರ ಸಂಬಂಧ ಬದುಕನ್ನು ಬದಲಿಸುತ್ತದೆ.

ಸರ್ವರನ್ನೂ ಪ್ರೀತಿಸುವ, ವಿರೋಧಿಗಳನ್ನು–ತನ್ನನ್ನು ವಿಮರ್ಶಿಸುವರನ್ನೂ ದ್ವೇಷಿಸದ ರಾಮಕೃಷ್ಣರು ಒಂದೆಡೆಯಾದರೆ, ಅನ್ಯಾಯದ ವಿರುದ್ಧ ಸಿಡಿಯುವ ನರೇಂದ್ರನಾಥ ಇನ್ನೊಂದೆಡೆ. ಅದು ಪರಸ್ಪರ ವಿರುದ್ಧ ಸ್ವಭಾವಗಳ ಸಾಂಗತ್ಯ. ಐದು ವರ್ಷಗಳ ಶಿಷ್ಯತ್ವದಲ್ಲಿ ರಾಮಕೃಷ್ಣರು ಏನನ್ನೂ ಹೇಳದೆ, ಪ್ರಶ್ನಿಸದೆ, ವಿಮರ್ಶಿಸದೆ ತಮ್ಮ ಪಡಿಯಚ್ಚಾಗಿ ಮಾರ್ಪಡಿಸಲು ಯತ್ನಿಸದೆ ಉಕ್ಕನ್ನು ನಿಧಾನವಾಗಿ ಹದಗೊಳಿಸುವಂತೆ ತಮ್ಮ ಶಿಷ್ಯನನ್ನು ರೂಪಿಸಿದರು.

ರಾಮಕೃಷ್ಣ ಪರಮಹಂಸರು ನಿರ್ವಾಣ ಹೊಂದುವ ಗಳಿಗೆಯಲ್ಲಿ ತಮ್ಮ ಬಳಿ ನರೇಂದ್ರರನ್ನು ಕರೆದು ಧ್ಯಾನಾಸಕ್ತರಾಗುತ್ತಾರೆ. ನರೇಂದ್ರರಿಗೆ ತಮ್ಮ ಮೈಯೊಳಗೆ ಸೂಕ್ಷ್ಮವಾದ ವಿದ್ಯುತ್ ಪ್ರವಾಹದ ಶಕ್ತಿಯೊಂದು ಹೊಕ್ಕಂತೆ ಮೈ ಜುಂ ಎನಿಸಿತು. 'ನನ್ನಲ್ಲಿ ಇದ್ದುದ್ದನೆಲ್ಲಾ ಇಂದು ನಿನಗೆ ನೀಡಿದ್ದೇನೆ. ಈಗ ನಾನೊಬ್ಬ ಫಕೀರ, ಭಿಕ್ಷುಕ. ನಾನು ಹರಿಸಿದ ಶಕ್ತಿಯಿಂದ ನೀನು ಅದ್ಭುತ ಕೆಲಸಗಳನ್ನು ಮಾಡಲು ಶಕ್ತನಾಗುತ್ತಿ. ಆದರೆ ನಾನು ಬದುಕಿರುವವರೆಗೂ ನೀನು ಎಲ್ಲಿಂದ ಬಂದೆಯೋ ಅಲ್ಲಿಗೆ ಹೋಗಿರು' ಎಂಬುದು ಅವರ ಕೊನೆಯ ಮಾತುಗಳಾಗಿದ್ದವು.

ವಿವೇಕಾನಂದರು ವಿಶ್ವಸಂಚಾರ ಹಾಗೂ ಭಾರತದರ್ಶನದಲ್ಲಿ ತಮ್ಮನ್ನು ತೊಡಗಿಸಿಕೊಂಡು ಮತಧರ್ಮಗಳ ಮೌಢ್ಯತೆಯಲ್ಲಿ ಮುಳುಗಿದವರನ್ನು ಎಚ್ಚರಿಸುವ ಕೆಲಸವನ್ನು ಸಮರ್ಥವಾಗಿ ನಿರ್ವಹಿಸಿದರು. 1893ರಲ್ಲಿ ಚಿಕಾಗೋದಲ್ಲಿ ನಡೆದ ಸರ್ವಧರ್ಮ ಸಮ್ಮೇಳನದಲ್ಲಿ ಭಾಗವಹಿಸಿದರು. ಎಲ್ಲಾ ದೇವರು, ಧರ್ಮಕ್ಕಿಂತಲೂ ಮಿಗಿಲಾದದ್ದು ಮಾನವಧರ್ಮ ಎಂದು ವಿಶ್ವದಾದ್ಯಂತ ಸಾರಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಹೀಗಾಗಿಯೇ ವಿವೇಕಾನಂದರ ವಿಚಾರಧಾರೆಗಳು ಜಡಗೊಂಡ ಸನಾತನವಾದಿಗಳ ಕೈಗೆ ನಿಲುಕದೆ ಜಾತಿ, ಮತಪಂಥಗಳಿಂದಾಚೆ ನಿಂತ ವಿಶ್ವಮಾನವನ ಅನ್ವೇಷಣೆಗೆ ತೊಡಗುತ್ತವೆ.

■ **ಅಮೃತಮತಿ**

## ಮಾತೇ ಮುತ್ತು

- ನಾವು ಬಯಸಿದಂತೆ ಬದುಕುವ ಸ್ವಾತಂತ್ರ್ಯ ಯಾವತ್ತೂ ಭಯಾನಕ ಹೋರಾಟದ ಫಲವೇ ಹೊರತು ಸುಲಭಕ್ಕೆ ಸಿಗುವುದಿಲ್ಲ.

  —ಪೂರ್ಣಚಂದ್ರ ತೇಜಸ್ವಿ

- ಪ್ರೀತಿ ಎಂಬುದು ಆರೋಗ್ಯವಂತರ ಕಾಯಿಲೆ.

  —ಪಿ. ಲಂಕೇಶ್

- ಅಂದಂದಿನ ಕೆಲಸವನ್ನು ಅಂದಂದೇ ಮಾಡಿಮುಗಿಸಿ, ಆ ವಿಷಯದ ಬಗ್ಗೆ ಬಹಳ ಚಿಂತೆ ಮಾಡದಂತೆ ಇರಬೇಕು. ಅದೇ ಒಳ್ಳೆಯ ಜೀವನ.

  ಮಾಸ್ತಿ ವೆಂಕಟೇಶ ಅಯ್ಯಂಗಾರ್

- ಪ್ರತಿಯೊಂದು ಸಮಸ್ಯೆಗೆ ಉತ್ತರ ಇರುತ್ತದೆ. ಈ ನಂಬಿಕೆ ಇದ್ದಾಗ ಪ್ರತಿಯೊಂದು ಕಷ್ಟವೂ ಪರಿಹಾರವಾಗುತ್ತದೆ.

  —ಆಲೂರು ವೆಂಕಟರಾಯ

- ಮನೆ ನಿಂತಿರುವುದು ಮಡದಿಯಿಂದ. ಅದು ಬಿದ್ದರೆ ಗಂಡನ ತಲೆಯ ಮೇಲೆ!

  —ಬೀಚಿ